
ವೀಣೆ ದೊರೆಸ್ವಾಮಿ ಅಯ್ಯಂಗಾರ್

ಸಂಗೀತಮಯವಾಗಲೆಂಬ ಉದ್ದೇಶದಿಂದ ಮೈಸೂರಿನಾದ್ಯಂತ ಏಳೆಂಟು ವೇದಿಕೆಗಳಲ್ಲಿ ಏಕಕಾಲಕ್ಕೆ ಸಂಗೀತ ಕಛೇರಿಗಳು ಕೇಳುಗರನ್ನು ತಲೆದೂಗುವಂತೆ ಮಾಡಿದವು. ಹಲವಾರು ಸಂಗೀತಗಾರರಿಗೆ ದಸರಾದಲ್ಲಿ ಹಾಡಲು ಅವಕಾಶ ಸಿಗತೊಡಗಿತು. 'ಹಾಡಿದರೆ ದಸರಾದಲ್ಲೇ ಹಾಡಬೇಕು' ಎಂಬ ಕನಸು ಹಲವು ಕಲಾವಿದರದ್ದು. ಒಂದೇ ಒಂದು ಅವಕಾಶಕ್ಕಾಗಿ ವರ್ಷಗಟ್ಟಲೆ ಕಲಾವಿದರು ಕಾಯತೊಡಗಿದರು, ಹಾತೊರೆಯತೊಡಗಿದರು.

ರಾಜರ ಕಾಲದಲ್ಲಿ ಮಾತ್ರವಲ್ಲ, ಪ್ರಜಾಪ್ರಭುತ್ವದ ದಿನಗಳ ಆಡಳಿತದಲ್ಲೂ ದಸರೆ ಮತ್ತು ಸಂಗೀತದ ಸಂಬಂಧ ಮಸುಕಾಗಲಿಲ್ಲ. ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಕಲಾವಿದರಿಗೆ ಅವಕಾಶ ಕೊಡಲಾರಂಭಿಸಿದ್ದಷ್ಟೇ ಅಲ್ಲದೆ ಸರ್ಕಾರದ ವತಿಯಿಂದಲೇ 'ಆಸ್ಥಾನ್ ವಿದ್ವಾನ್' ಪ್ರಶಸ್ತಿ ನೀಡುವ ಪದ್ಧತಿ ಬಂತು. ದಸರಾ ಸಂಗೀತದ ಜೊತೆಗೆ ನೃತ್ಯ, ನಾಟಕ, ಸಿನಿಮಾ ಸಂಗೀತ, ಯಕ್ಷಗಾನ, ವೀರಗಾಸೆ, ಕಂಸಾಳೆಗಳಂಥ ಕಲೆ ಪ್ರದರ್ಶನಕ್ಕೂ ಅವಕಾಶ ದೊರೆಯುವಂತಾಯಿತು. ಒಟ್ಟಿನಲ್ಲಿ ದಸರಾ ಎಂದರೆ ಅದು ಕಲೆಗಳ ಕಬ್ಬ, ಸಾಂಸ್ಕೃತಿಕ ಹಬ್ಬ ಎಂದೇ ಪ್ರಸಿದ್ಧಿ ಪಡೆಯಿತು.

ಇಂದಿಗೂ ಮೈಸೂರು ದಸರಾ ಎಂದರೆ ಅಲ್ಲಿ ಮಲ್ಲಿಗೆ, ಶ್ರೀಗಂಧದ ಘಮಲಿಗಿಂತಲೂ ಹೃದಯ ತಟ್ಟುವ ಮಧುರಾತಿಮಧುರ ಸಂಗೀತವೇ ಮುಂಚೂಣಿಯಲ್ಲಿದೆ. ದೇಶ ವಿದೇಶಗಳಿಂದ ಆಗಮಿಸಿದ ಗಣ್ಯರ, ಜನರ ಮಧ್ಯೆ ನಿರಂತರವಾಗಿ ಹತ್ತು ದಿನಗಳ ಕಾಲ ನಾಡಿನ, ಹೊರನಾಡಿನ ಕಲಾವಿದರಿಂದ ಸಂಗೀತ ಸಮಾರಾಧನೆ ಕೇಳುಗರ ಮನತಣಿಸುತ್ತಿದೆ. ಶಾಸ್ತ್ರೀಯ

### ರಾಗ ಹಂಸಧ್ವನಿ ಚಮತ್ಕಾರ

ಕರ್ನಾಟಕ ಸಂಗೀತ ಹಾಗೂ ಹಿಂದೂಸ್ತಾನಿ ಸಂಗೀತ ಎರಡರಲ್ಲೂ ಬಳಕೆಯಲ್ಲಿರುವ ಅತ್ಯಂತ ಸುಪ್ರಸಿದ್ಧ ರಾಗ ಹಂಸಧ್ವನಿ. ಔಡವ–ಔಡವ ಸ್ವರ ಸಮೂಹವನ್ನು (ಸರಿಗಪನಿಸ–ಸನಿಪಗರಿಸ) ಹೊಂದಿರುವ ರಾಗ ಹಂಸಧ್ವನಿಯಲ್ಲಿ ಕರ್ನಾಟಕ ಸಂಗೀತದ 'ವಾತಾಪಿ ಗಣಪತಿಂ ಭಜೆ' ಕೀರ್ತನೆ (ಸಂಸ್ಕೃತ ಭಾಷೆಯ ಕೃತಿ) ಕೇಳಿ ಆನಂದಿಸದ ಸಹೃದಯರಿಲ್ಲವೆಂದೇ ಹೇಳಬಹುದು. ಈ ಕೀರ್ತನೆಯನ್ನು ಕರ್ನಾಟಕ ಸಂಗೀತ ಸ್ವರ ಸಂಯೋಜಕ ವಿದ್ವಾನ್ ರಾಮಸ್ವಾಮಿ ದೀಕ್ಷಿತರ ಮಗ ವಾಗ್ಗೇಯಕಾರ ಮುತ್ತುಸ್ವಾಮಿ ದೀಕ್ಷಿತರು ರಚಿಸಿದರು.

ಹಿಂದೂಸ್ತಾನಿ ಸಂಗೀತದಲ್ಲಿ ಅಪಾರ ಆಸಕ್ತಿ ಇಟ್ಟುಕೊಂಡಿದ್ದ ನಾಲ್ವಡಿ ಒಡೆಯರ್ ಅವರು, ಹಿಂದೂಸ್ತಾನಿ–ಕರ್ನಾಟಕ ಸಂಗೀತ ನಡುವೆ ಕೊಡುಕೊಳುವ ಸಂಬಂಧ ಏರ್ಪಡಿಸಲು ಇಚ್ಛಿಸಿದರು. 'ವಾತಾಪಿ ಗಣಪತಿಂ ಭಜೆ' ಕೃತಿಯನ್ನು ಹಿಂದೂಸ್ತಾನಿ ಶೈಲಿಯಲ್ಲಿ ಕೇಳುವ ಆಸೆ ಅವರದು. ಇದಕ್ಕಾಗಿ ಹಿಂದೂಸ್ತಾನಿ ಸಂಗೀತದ ಬೆಂಡಿ ಬಜಾರ್ ಘರಾಣದ ಉಸ್ತಾದ್ ಅಮನ್ ಅಲಿ ಖಾನ್ ಅವರನ್ನು ಮೈಸೂರಿಗೆ ಕರೆಸಿ ಈ ಕೀರ್ತನೆ ಕೇಳಿಸಿದರು. ಖಾನರೂ ಈ ಕೃತಿಯ ಮಾಧುರ್ಯಕ್ಕೆ ಮಾರುಹೋಗಿ ಇದರ ತದ್ರೂಪವಾಗಿ 'ಲಾಗಿ ಲಗನ್ ಪತಿ ಸಖಿ' ಬಂದೀಶ್ ಅನ್ನು ರಚಿಸಿದರು. ಈ ಬಂದೀಶ್ ಅತ್ಯಂತ ಪ್ರಸಿದ್ಧವಾಗಿದೆ. ದಸರಾ ಮಹೋತ್ಸವದ ಸಂಗೀತ ಕಛೇರಿಗಳಲ್ಲಿ ಒಂದೇ ರಾಗದ ಎರಡೂ ಶೈಲಿಯ ರಚನೆ ಈಗಲೂ ಗಾಯಕರಿಂದ ಹಾಡಿಸಿಕೊಳ್ಳುತ್ತವೆ. ವಾದಕರು ನುಡಿಸಾಣಿಕೆಯಲ್ಲಿ ಕೇಳುಗರನ್ನು ರೋಮಾಂಚನಗೊಳಿಸುತ್ತಿದ್ದಾರೆ. ಹಂಸಧ್ವನಿ ರಾಗದ ಈ ಚಿರಪರಿಚಿತ ರಚನೆ ಒಡೆಯರ ಪ್ರಯತ್ನದ, ಸಂಗೀತಾಭಿಮಾನದ ಫಲವಾಗಿ ರಚಿತವಾಗಿದೆ.

## ಹಿಂದೂಸ್ತಾನಿ ಸಂಗೀತದ ಸ್ವರ್ಣಯುಗ

ಮೈಸೂರಿನಲ್ಲಿ ಚಾಮರಾಜ ಒಡೆಯರ ಕಾಲದಲ್ಲೇ ಹಿಂದೂಸ್ತಾನಿ ಸಂಗೀತಕ್ಕೂ ಪ್ರೋತ್ಸಾಹ ಸಿಗಲಾರಂಭಿಸಿತು. ಒಡೆಯರ್ ಮುಂಬಯಿಗೆ ಹೋಗಿ (1893ರಲ್ಲಿ) ಎರಡು ತಿಂಗಳು ತಂಗಿ ಹಿಂದೂಸ್ತಾನಿ ಸಂಗೀತವನ್ನು ಆಸ್ವಾದಿಸಿದ್ದರು. ಆಗ್ರಾ ಘರಾಣೆಯ ಉಸ್ತಾದ್ ನಿಸಾರ್ ಹುಸೇನ್ ಖಾನರ ಸಂಗೀತವನ್ನು ಮೆಚ್ಚಿ ಅವರನ್ನು ಮೈಸೂರಿಗೆ ಕರೆತಂದು ಆಸ್ಥಾನ ವಿದ್ವಾಂಸರನ್ನಾಗಿಯೂ ಮಾಡಿದ್ದರು. ಮುಂದೆ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲ ಹಿಂದೂಸ್ತಾನಿ ಸಂಗೀತದ ಸ್ವರ್ಣಯುಗವೇ ಆಯಿತು.

ದಸರಾ ಸಮಯದಲ್ಲಿ ಕರ್ನಾಟಕ ಸಂಗೀತದಂತೆಯೇ ಹಿಂದೂಸ್ತಾನಿ ಸಂಗೀತ ಕಲಾವಿದರಿಗೂ ಆದ್ಯತೆ ನೀಡಲಾರಂಭಿಸಿದರು. ಕರ್ನಾಟಕ ಸಂಗೀತದ ಕೃತಿ, ಕೀರ್ತನೆ, ತಿಲ್ಲಾನಗಳ ಜೊತೆ ಜೊತೆಯಾಗಿ ಹಿಂದೂಸ್ತಾನಿ ಸಂಗೀತದ ಖಯಾಲ್, ಬಂದೀಶ್, ತಾನ್–ತರಾನಗಳನ್ನು ಸವಿಯುವ ಅವಕಾಶ ದಸರಾ ಮಹೋತ್ಸವದಲ್ಲಿ ಕೇಳುಗರಿಗೆ ಲಭಿಸಲಾರಂಭಿಸಿತು.

ಅದು 1908ನೇ ಇಸವಿ. ದಸರಾ ದರ್ಬಾರ್‌ನಲ್ಲಿ ಅಂದಿನ ಗಾಯಕ ಉಸ್ತಾದ್ ಫಯಾಜ್ ಹುಸೇನ್ ಖಾನ್ ಅವರ ಗಾಯನ. ಇದು ಎಷ್ಟು ಸುಶ್ರಾವ್ಯವಾಗಿತ್ತೆಂದರೆ, ಸ್ವತಃ ಮಹಾರಾಜರೇ ಖಾನ್ ಸಾಹೇಬರನ್ನು ಕರೆದು 'ಆಫ್ತಾ ಇ ಮ್ಯೂಸಿಕಿ' (ಸ್ವರ ಭಾಸ್ಕರ) ಎಂಬ ಬಿರುದು ನೀಡಿ ಸನ್ಮಾನಿಸಿದ್ದರು. ಇದು ಹಿಂದೂಸ್ತಾನಿ ಸಂಗೀತಕ್ಕೆ ದಸರಾ ಮಹೋತ್ಸವ ಸಂದರ್ಭದಲ್ಲಿ ದಕ್ಕಿದ ಮೊದಲ ಪುರಸ್ಕಾರ ಎಂಬ ದಾಖಲೆಯ ಭಾಷ್ಯ ಬರೆಯಿತು.

ಮುಂದೆ ಹಿಂದೂಸ್ತಾನಿ ಸಂಗೀತದಲ್ಲಿ ದಿಗ್ಗಜರೆನಿಸಿದ ವಿದ್ವಾಂಸರೆಲ್ಲರಿಗೂ ದಸರಾದಲ್ಲಿ ಹಾಡುವ ಅವಕಾಶ ಸಿಗುವಂತಾಯಿತು. ದೂರದೂರದ ಗಾಯಕ–ವಾದಕರು ತಮ್ಮ ಸರದಿಗಾಗಿ ಕಾಯಲಾರಂಭಿಸಿದರು. ಇವರೆಲ್ಲರಿಗೆ ದಸರಾ ದರ್ಬಾರಿನಲ್ಲಿ ಹಾಡಿ ನುಡಿಸಲು ಅವಕಾಶ ಒದಗಿಸುವ ಹೊಣೆ ಭಕ್ಷಿ ಸುಬ್ಬಣ್ಣ ಹಾಗೂ ವೀಣೆ ಶೇಷಣ್ಣ ಅವರ ಬಿತ್ತು. ಹೀಗೆ ದಸರಾ ದರ್ಬಾರಿನಲ್ಲಿ ಹಾಡಿದವರಲ್ಲಿ ಜೈಪುರದ ರಹಿಮತ್ ಹುಸೇನ್ ಖಾನ್, ಇಂದೋರ್‌ನ ಜಮಾಲ್ ಖಾನ್, ಉದಯಪುರದ ಬೋರಾಖಾನ್, ಮುಂಬಯಿಯ ಅಬ್ದುಲ್ ಕರೀಂ ಖಾನ್, ಮದ್ರಾಸಿನ ಜಾನಿಬಾಯಿ, ದೆಹಲಿಯ ಮುಹಮ್ಮದ್ ಖಾನ್, ಬರೋಡಾದ ಜಮಾಲುದ್ದೀನ್ ಖಾನ್, ಜಲತರಂಗ ವಿದ್ವಾನ್ ಅಲ್ಲಾ ಭಕ್ಷ್ ಮುಂತಾದವರು ಪ್ರಮುಖರು. ಇವರೆಲ್ಲರಿಗೆ ಸನ್ಮಾನ ಪುರಸ್ಕಾರ ನೀಡಿ ಗೌರವಿಸಿದ್ದು ಹಿಂದೂಸ್ತಾನಿ ಸಂಗೀತ ದಸರಾ ನೆಲೆಯಲ್ಲಿ ಅರಳಲು ಅನುಕೂಲವಾಯಿತು.